# ಸಂಚಾರ ನಿಯಮ: ಜಾಗೃತಿ ಮೂಡಿಸುವ ಕೆಲಸ ವ್ಯಾಪಕವಾಗಿ ಆಗಲಿ, ಸಂಚಾರ ಪೊಲೀಸರ ವರ್ತನೆಯೂ ಬದಲಾಗಲಿ

ಸಂಚಾರ ನಿಯಮ ಪಾಲಿಸುವುದರ ಅಗತ್ಯವನ್ನು ಮನಗಾಣಿಸುವ ಪ್ರಯತ್ನಗಳನ್ನು ಹೆಚ್ಚು ಪರಿಣಾಮಕಾರಿ ಆಗಿಸುವುದು ಮತ್ತು ಉಲ್ಲಂಘನೆಯನ್ನು ತಡೆಯುವ ವಿಧಿ–ವಿಧಾನಗಳಲ್ಲಿನ ಎಡವಟ್ಟುಗಳನ್ನು ನಿವಾರಿಸುವುದರ ಬಗೆಗೆ ಗಂಭೀರ ಚಿಂತನೆಗಳು ನಡೆಯಬೇಕಾಗಿದೆ. ದಂಡದ ಹೆದರಿಕೆಯಿಂದ ನಿಯಮ ಪಾಲಿಸುವಂತಹ ಮನಃಸ್ಥಿತಿ ಮತ್ತು ದಂಡ ವಸೂಲಿಯನ್ನೇ ಪ್ರಧಾನ ಗುರಿಯಾಗಿಸಿಕೊಳ್ಳುವಂತಹ ಧೋರಣೆಯಿಂದ ಬೇರೆ ಬೇರೆ ಬಗೆಯ ಅವಘಡಗಳು ಸಂಭವಿಸುತ್ತಿವೆ. ಅವು ಕೆಲವೊಮ್ಮೆ ಪ್ರಾಣಕ್ಕೂ ಕುತ್ತು ತಂದಿರುವಂತಹ ನಿದರ್ಶನಗಳು ನಮ್ಮ ಕಣ್ಣ ಮುಂದಿವೆ. ಆದಕಾರಣ, ವಾಹನ ಸವಾರರು, ಪಾದಚಾರಿಗಳು ಮತ್ತು ಸಂಚಾರ ಪೊಲೀಸರನ್ನು ಈ ದಿಸೆಯಲ್ಲಿ ಹೆಚ್ಚು ಸಂವೇದನಾಶೀಲಗೊಳಿಸುವ ಅಗತ್ಯ ಇದೆ.

ಮಂಡ್ಯದ ಸ್ವರ್ಣಸಂದ್ರ ಸಮೀಪದ ಹೆದ್ದಾರಿಯಲ್ಲಿ ಇತ್ತೀಚೆಗೆ ಒಂದು ಹೃದಯವಿದ್ರಾವಕ ಘಟನೆ ಸಂಭವಿಸಿದೆ. ಸಂಚಾರ ಪೊಲೀಸರು ದಿಢೀರ್ ತಡೆಯೊಡ್ಡಿದ ಕಾರಣಕ್ಕಾಗಿ ಬೈಕ್‌ಗೆ ಟ್ಯಾಂಕರ್‌ವೊಂದು ಹಿಂದಿನಿಂದ ಡಿಕ್ಕಿ ಹೊಡೆದಿದೆ. ಇದರಿಂದಾಗಿ ಬೈಕ್ ಸವಾರ ಆಯತಪ್ಪಿ ಬಿದ್ದ ಪರಿಣಾಮವಾಗಿ ಮೂರು ವರ್ಷ ವಯಸ್ಸಿನ ಬಾಲಕಿ ಮೃತಪಟ್ಟಿದ್ದಾಳೆ. ದಾರುಣವಾದ ಈ ಘಟನೆಯು ಕರುಳು ಕಿವುಚುವಂತಿದೆ. ಅಂತೆಯೇ ವಾಹನ ಚಾಲಕರು, ಸಂಚಾರ ಪೊಲೀಸರು ಮತ್ತು ಸಾರ್ವಜನಿಕರಿಗೆ ಎಚ್ಚರಿಕೆಯ ಪಾಠದಂತೆಯೂ ಇದೆ.

ಬಾಲಕಿಗೆ ನಾಯಿ ಕಚ್ಚಿದೆ. ಅವಳನ್ನು ಆಸ್ಪತ್ರೆಗೆ ಕರೆದೊಯ್ಯುವ ಧಾವಂತದಲ್ಲಿ ಬೈಕ್ ಸವಾರ ಹೆಲ್ಮೆಟ್ ಧರಿಸುವುದನ್ನು ಮರೆತಿದ್ದಾರೆ. ಹೆಲ್ಮೆಟ್ ಧರಿಸದೆ ಬೈಕ್ ಓಡಿಸಿದ ಕಾರಣಕ್ಕಾಗಿ ಸಂಚಾರ ಪೊಲೀಸರು ಆತನನ್ನು ತಡೆದಿದ್ದಾರೆ. ಆ ಸಂದರ್ಭವನ್ನು ಪರಿಗಣಿಸಿ, ಮಾನವೀಯ ನೆಲೆಯಲ್ಲಿ ಯೋಚಿಸಿದಾಗ ಬೈಕ್ ಸವಾರನ ನಿಯಮ ಉಲ್ಲಂಘನೆಯು ಘೋರ ಅಪರಾಧ ಅನ್ನಿಸುವುದಿಲ್ಲ. ಕರ್ತವ್ಯ ನಿರ್ವಹಣೆಯ ದೃಷ್ಟಿಯಲ್ಲಿ ಅವಲೋಕಿಸಿದಾಗ, ಪೊಲೀಸರು ತಮ್ಮ ಕೆಲಸವನ್ನು ತಾವು ಮಾಡಿದ್ದಾರೆ ಎಂದೂ ಅನ್ನಿಸುತ್ತದೆ. ಆದರೆ ಅಚಾತುರ್ಯ ಘಟಿಸಿದೆ. ಅದು, ಬಾಲಕಿಯೊಬ್ಬಳನ್ನು ಬಲಿ ಪಡೆದಿದೆ.

ಸಂಚಾರ ಪೊಲೀಸರು ಎಲ್ಲೋ ಮರೆಯಲ್ಲಿ ನಿಂತು, ಕಳ್ಳಕಾಕರನ್ನು ಹಿಡಿಯುವಂತೆ ಏಕಾಏಕಿ ವಾಹನಗಳನ್ನು ತಡೆಯುವಂತಹ ಪರಿಪಾಟ ರೂಢಿಸಿಕೊಂಡಿದ್ದಾರೆ. ಇದರಿಂದ ಗಲಿಬಿಲಿಗೆ ಒಳಗಾಗುವ ಸವಾರರು ವಾಹನದ ಮೇಲೆ ನಿಯಂತ್ರಣ ಕಳೆದುಕೊಂಡಂತಹ ಸಂದರ್ಭಗಳು ಹೇರಳವಾಗಿ ಕಾಣಸಿಗುತ್ತವೆ. ಪರಿಣಾಮವಾಗಿ ಆಯತಪ್ಪಿ ಬಿದ್ದಿರುವ, ವಾಹನವನ್ನು ಅಡ್ಡಾದಿಡ್ಡಿ ನುಗ್ಗಿಸಿರುವಂತಹ ನಿದರ್ಶನಗಳುಂಟು. ಕೆಲವು ಪಡ್ಡೆಹುಡುಗರು ತಪ್ಪಿಸಿಕೊಳ್ಳುವ ಭರದಲ್ಲಿ ಅಪಘಾತಕ್ಕೆ ಈಡಾಗಿರುವ ಉದಾಹರಣೆಗಳೂ ಇವೆ. ಆದರೂ ಸಂಚಾರ ಪೊಲೀಸರ ಈ ಬಗೆಯ 'ಮಿಂಚಿನ ಕಾರ್ಯಾಚರಣೆ' ಅಬಾಧಿತವಾಗಿ ಸಾಗಿದೆ.

ತಂತ್ರಜ್ಞಾನ ಬಹಳಷ್ಟು ಮುಂದುವರಿದಿದೆ. ನಗರಗಳ ಮುಖ್ಯ ರಸ್ತೆಗಳಲ್ಲಿ ಸಿ.ಸಿ. ಟಿ.ವಿ. ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಸಂಚಾರ ನಿಯಮವನ್ನು ಯಾರಾದರೂ ಉಲ್ಲಂಘಿಸಿದ್ದರೆ ಅದು ಕ್ಯಾಮೆರಾದಲ್ಲಿ ದಾಖಲಾಗಿರುತ್ತದೆ. ಅದನ್ನು ಆಧರಿಸಿ ಮನೆಗೆ ನೋಟಿಸ್ ಕಳುಹಿಸಿ ದಂಡ ವಸೂಲಿ ಮಾಡುವ ಮಾರ್ಗವನ್ನು ತಂತ್ರಜ್ಞಾನವು ನಮ್ಮ ಕೈಗೆ ಇತ್ತಿರುವಾಗ, ಸವಾರರನ್ನು ಅಟ್ಟಾಡಿಸಿಕೊಂಡು ಹೋಗುವ ಅಗತ್ಯ ಏನಿದೆ? ಪೊಲೀಸರ ಕೈಯಲ್ಲಿ ಮೊಬೈಲ್ ಫೋನ್ ಇರುತ್ತದೆ. ನಿಯಮ ಉಲ್ಲಂಘನೆಯ ದೃಶ್ಯವನ್ನು ಅದರಲ್ಲೂ ಸೆರೆಹಿಡಿಯಲು ಅವಕಾಶ ಇದ್ದೇ ಇದೆ. ಹೀಗಿರುವಾಗ ಹೊಂಚು ಹಾಕಿ ಚಿರತೆಯಂತೆ ಎರಗುವ ಸಾಹಸವೇಕೆ?

ಮನೆಗೆ ನೋಟಿಸ್ ಕಳುಹಿಸಿ ದಂಡ ವಸೂಲಿ ಮಾಡುವ ಮಾರ್ಗವನ್ನು ತಂತ್ರಜ್ಞಾನವು ನಮ್ಮ ಕೈಗೆ ಇತ್ತಿರುವಾಗ, ಸವಾರರನ್ನು ಅಟ್ಟಾಡಿಸಿಕೊಂಡು ಹೋಗುವ ಅಗತ್ಯ ಏನಿದೆ? ನಿಯಮ ಉಲ್ಲಂಘನೆಯ ದೃಶ್ಯವನ್ನು ಮೊಬೈಲ್‌ನಲ್ಲಿ ಸೆರೆಹಿಡಿಯಲು ಅವಕಾಶ ಇದ್ದೇ ಇದೆ. ಹೀಗಿರುವಾಗ ಪೊಲೀಸರು ಹೊಂಚು ಹಾಕಿ ಚಿರತೆಯಂತೆ ಎರಗುವ ಸಾಹಸವೇಕೆ?

ನಮ್ಮಲ್ಲಿ ವಾಹನ ಚಾಲನೆಗೆ ಪರವಾನಗಿ ಪಡೆಯುವ ಪ್ರಕ್ರಿಯೆಯೇ ದಲ್ಲಾಳಿಮಯ ಆಗಿದೆ. ದುಡ್ಡಿದ್ದರೆ ಪರವಾನಗಿ ಪಡೆಯುವುದು ಚಿಟಿಕೆ ಹೊಡೆದಷ್ಟು ಸಲೀಸು. ಪೊಲೀಸರ ಭಯದಿಂದಾಗಿ ನಿಯಮ ಪಾಲಿಸುವಂತಹ ಮಂದಿಯ ಸಂಖ್ಯೆ ದೊಡ್ಡದಾಗಿಯೇ ಇದೆ. ಸುಗಮ ಮತ್ತು ಸುರಕ್ಷಿತ ಸಂಚಾರಕ್ಕೆ ನಿಯಮ ಪಾಲಿಸುವುದು ಅಗತ್ಯ ಎಂದು ಭಾವಿಸುವವರ ಸಂಖ್ಯೆ ವಿರಳ. ಹೀಗಾಗಿ, ರಸ್ತೆಗೆ ಇಳಿಯುವ ವಾಹನಗಳ ಸಂಖ್ಯೆ ಹೆಚ್ಚಿದಂತೆಲ್ಲ ಅಪಘಾತಗಳ ಸಂಖ್ಯೆಯೂ ಹೆಚ್ಚುತ್ತಲೇ ಇದೆ.

ನಿಯಮ ಪಾಲನೆ ಮತ್ತು ಸುರಕ್ಷಿತ ಚಾಲನೆಗೆ ವಾಹನ ಸವಾರರು ಆದ್ಯತೆ ನೀಡಬೇಕು. ಈ ಬಗ್ಗೆ ಜಾಗೃತಿ ಮೂಡಿಸುವಂತಹ ಕಾರ್ಯಕ್ರಮಗಳು ನಿರಂತರವಾಗಿ ನಡೆಯಬೇಕು. ಮನೆಯಲ್ಲಿ ಮಕ್ಕಳಿಗೆ ಪೋಷಕರು ತಿಳಿಹೇಳಬೇಕು. ಶಾಲೆಯಲ್ಲಿ ಕಲಿಸಬೇಕು. ಪಠ್ಯ ಮತ್ತು ಆ ಮೂಲಕ ಬದುಕಿನ ಭಾಗವೂ ಆಗಬೇಕು. ಬೈಕ್ ಮೇಲೆ ಕುಳಿತು ಮೊಬೈಲ್ ಫೋನ್ ಕಿವಿಗೆ ತಾಗಿಸಿಕೊಂಡು ರಸ್ತೆಯಲ್ಲಿ ಸರ್ಕಸ್ ಮಾಡುವುದರಿಂದ ಒದಗುವಂತಹ ಅಪಾಯ, ಹೆಲ್ಮೆಟ್ ಮತ್ತು ಸೀಟ್‌ಬೆಲ್ಟ್‌ನ ಅಗತ್ಯ, ಅತಿವೇಗ ಹಾಗೂ ಮದ್ಯ ಸೇವಿಸಿ ಚಾಲನೆ ಮಾಡುವುದು ಹೇಗೆ ಅಪಾಯಕ್ಕೆ ಆಹ್ವಾನ ನೀಡುತ್ತವೆ ಎಂಬುದರ ಬಗ್ಗೆ ಯುವಪೀಳಿಗೆಯಲ್ಲಿ ಅರಿವು ಮೂಡಿಸುವ ಕೆಲಸ ಆಗಬೇಕು. ಹಾಗೆಯೇ ಸಂಚಾರ ಪೊಲೀಸರ ವರ್ತನೆಯೂ ಆಮೂಲಾಗ್ರ ಬದಲಾವಣೆಗೆ ಒಳಗಾಗಬೇಕಿದೆ. ಪಾದಚಾರಿಗಳು, ಸವಾರರು ಮತ್ತು ಪೊಲೀಸರು ತಮ್ಮ ಜವಾಬ್ದಾರಿ ಅರಿತು ನಡೆದರೆ ಅಪಘಾತಗಳು ಮತ್ತು ಅವುಗಳಿಂದಾಗುವ ಸಾವು–ನೋವಿನ ಪ್ರಮಾಣವನ್ನು ಗಣನೀಯವಾಗಿ ತಗ್ಗಿಸಬಹುದು.

■ ಎನ್‌. ಉದಯಕುಮಾರ್



ಈಶ್ವರ್